ಖಾಸಗಿಯವರಿಂದ ವಿಮಾನಯಾನ ಅಭಿವೃದ್ಧಿ

121 - ಶ್ರೀ ಎನ್. ರಾಜಣ್ಣ (ಭಾರತೀನಗರ) : ಮಾನ್ಯ ಬೃಹತ್ ಮತ್ತ ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಣ್ಣವಿಮಾನ ನಿಲ್ದಾಣಗಳನ್ನು ಖಾಸಗಿ ವಲಯದ ಮುಖಾಂತರ ಅಭಿವೃದ್ಧಿಪಡಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಯಾವ ಯಾವ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲು ಖಾಸಗಿ ವಲಯಕ್ಕೆ ನೀಡಲಾಗುವುದು

ಇ) ಈ ಬಗ್ಗೆ ಖಾಸಗಿ ವಲಯವನ್ನು ಆಹ್ವಾನಿಸಲು ಈಗಾಗಲೇ ತೆಗೆದುಕೊಂಡ ಕ್ರಮಗಳೇನು?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಹೌದು. ರಾಜ್ಯ ಸರ್ಕಾರವು ರಾಜ್ಯದ ಮುಖ್ಯ ನಗರ ಮತ್ತು ಊರುಗಳಲ್ಲಿ ಖಾಸಗಿ ವಲಯದ ಸಹಯೋಗದೊಂದಿಗೆ ಸಣ್ಣ ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವ ಸಾಧ್ಯತೆಯನ್ನು ಪರಿಶೀಲಿಸುತ್ತಿದೆ.

ಆ) ಗುಲ್ಬರ್ಗಾ, ಕೊಪ್ಪಳ, ಹುಬ್ಬಳ್ಳಿ, ಮೈಸೂರು, ಮತ್ತು ಹಾಸನದಲ್ಲಿ ಇರುವ ಸಣ್ಣ ವಿಮಾನ ನಿಲ್ದಾಣಗಳನ್ನು ಖಾಸಗಿ ಸಂಸ್ಥೆಗಳ ಸಹಯೋಗದೊಂದಿಗೆ ಅಭಿವೃದ್ಧಿಪಡಿಸುವುದನ್ನು ಪರಿಗಣಿಸಲಾಗುತ್ತಿದೆ.

ಇ) ಕರ್ನಾಟಕದಲ್ಲಿ ನೆಲೆ ಹೊಂದಿರುವ ಎರಡು ಖಾಸಗಿ ಕೈಗಾರಿಕಾ ಸಮೂಹಗಳು ಗುಲ್ಬರ್ಗಾ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ಆಸಕ್ತಿ ತೋರಿಸಿವೆ. ಹಾಗೆಯೇ ಕೊಪ್ಪಳ ವಿಮಾನ ನಿಲ್ದಾಣವನ್ನು ಅಭಿವೃದ್ಧಿಗೊಳಿಸಲು ಎರಡು ಕರ್ನಾಟಕದ ಕೈಗಾರಿಕಾ ಸಮೂಹಗಳು ಆಸಕ್ತಿ ತೋರಿಸಿವೆ. ಸಣ್ಣ ವಿಮಾನ ನಿಲ್ದಾಣಗಳನ್ನು ಖಾಸಗಿ ಬಂಡವಾಳ ಸಹಯೋಗದೊಂದಿಗೆ ಅಭಿವೃದ್ಧಿ ಪಡಿಸುವ ಬಗ್ಗೆ ವಿಧಿ-ವಿದಾನಗಳನ್ನು ಸರ್ಕಾರ ಪರಿಶೀಲಿಸುತ್ತಿದೆ.

ನಿಪ್ಪಾಣಿಯಲ್ಲಿ ನೀರಿನ ಸಮಸ್ಯೆ.

123 - ಶ್ರೀ ಸುಭಾಷ್ ಎಸ್. ಜೋಷಿ (ನಿಪ್ಪಾಣಿ) : ಮಾನ್ಯ ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಿಪ್ಪಾಣಿ ನಗರದಲ್ಲಿ ತೀವ್ರ ನೀರಿನ ತೊಂದರೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ದೆಸೆಯಲ್ಲಿ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು.